# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 27/05/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಡಾ॥ ವೆಂಕಟೇಶ್ ಆರ್, ವಾರ್ಡ್ 49, ಆರೋಗ್ಯಾಧಿಕಾರಿ<br>4. ಶ್ರೀ.ವಿಜಯರಾಜ್ ಎಸ್, ವಾರ್ಡ್ ನಂ.49, ಕಿರಿಯ ಆರೋಗ್ಯ ಪರಿವೀಕ್ಷಕರು<br>5. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>6. ಪೂಜಾ ಎಂ ಸಹಾಯಕ ಅಭಿಯಂತರರು<br>7. ಮೊಹಮದ್ ರಹಮತುಲ್ಲಾ, ಕೆಲಸ ಪರಿವೀಕ್ಷಕರು<br>8. ರಜಿನಿ ಎ, ಬಿಡಬ್ಲ್ಯೂಎಸ್‌ಎಸ್‌ಬಿ, ಸಹಾಯಕ ಅಭಿಯಂತರರು<br>9. ವಿಜಯಕುಮಾರ್ ಹೊನ್ನೂರ್ ಸಹಾಯಕ ಅಭಿಯಂತರರು ವಿದ್ಯುತ್<br>10. ಶ್ರೀ.ಗುರುಪ್ರಸಾದ್, ಮಾರ್ಷಲ್ | 1. ವೀರಪಿಂಟೋ ಕೆ.ಎಸ್.ಎಫ್.ಸಿ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡಂತೆ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ದೇವಸ್ಥಾನ /ಶಾಲೆಯ ಬಳಿಯ ಅಂಗಡಿಗಳಲ್ಲಿ ಕಾಫೀ, ಟೀ, ಸಿಗರೇಟ್ ಹಾಗೂ ಗಾಂಜಾ ಸೇವನೆ ನಡೆಯುತ್ತಿರುವ ಬಗ್ಗೆ ಕ್ರಮಕೈಗೊಳ್ಳಲು ಹಿಂದಿನ ಸಭೆಯಲ್ಲಿ ಸೂಚಿಸಿರುವ ಮೇರೆಗೆ ಬಿಬಿಎಂಪಿ ವತಿಯಿಂದ ಕಾಫಿ, ಟೀ, ಸಿಗರೇಟ್ ಅಂಗಡಿಗಳಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ, ದಂಡ ವಿಧಿಸಲಾಗಿರುತ್ತದೆ, ಸಿಗರೇಟ್ ಕೇಸ್ ಹಾಕಲಾಗಿರುತ್ತದೆ ಹಾಗೂ ಅಂಗಡಿ ಮಾಲೀಕರಿಗೆ ವಾರ್ನಿಂಗ್ ಮಾಡಲಾಗಿದ್ದರೂ ಸಹ ಸಮಸ್ಯೆ ಇತ್ಯರ್ಥವಾಗಿರುವುದಿಲ್ಲ, ಈ ಸಂಬಂಧ ಕ್ರಮ ಕೈಗೊಳ್ಳಲು ಸಮಿತಿ ಸದಸ್ಯರು ಮನವಿ ಸಲ್ಲಿಸಿದ್ದು, ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಹಾಗೂ ಪೋಲೀಸ್ ಇಲಾಖೆಗೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಹಾಗೂ ಕೆಲವು ಅಂಗಡಿಗಳ ಮಾಲೀಕರುಗಳು ಲೈಸನ್ಸ್ ಪಡೆದಿರುವುದಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರು ಸದರಿ ಅಂಗಡಿಗಳಿಗೆ ಲೈಸನ್ಸ್ ಪಡೆಯುವಂತೆ ನೋಟೀಸ್ ಜಾರಿ ಮಾಡಲು ಸೂಚಿಸಲಾಯಿತು.

**ಪು.ತಿ.ನೋ,**

Scanned with CamScanner

ಪಾಟ್‌ಹೋಲ್ಸ್‌ಗಳ ಕಾರ್ಯ ಪೂರ್ಣಗೊಂಡಿದ್ದು, ಸದರಿ ವಾರ್ಡ್‌ನ 27 ರಸ್ತೆಗಳ ಡಾಂಬರೀಕರಣ ಕಾರ್ಯ ಪೂರ್ಣಗೊಂಡಿದ್ದು, 40 ರಸ್ತೆಗಳ ಡಾಂಬರೀಕರಣ ಪ್ರಗತಿಯಲ್ಲಿದೆ ಹಾಗೂ 14 ರಸ್ತೆಗಳ ಡಾಂಬರೀಕರಣ ಇನ್ನು ಪ್ರಾರಂಭಿಸಿರುವುದಿಲ್ಲ ಎಂಬುದಾಗಿ ವಾರ್ಡ್‌ನ ಸಹಾಯಕ ಇಂಜಿನಿಯರ್ ಮಾಹಿತಿ ನೀಡಿದರು.

ಪ್ಲಾಸ್ಟೀಕ್ ಬಳಕೆಯನ್ನು ಶೇ.100 ನಿಷೇದಿಸಲು ಸೂಚಿಸಲಾಯಿತು ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವವರಿಗೆ ಮೊದಲು ವಾರ್ನಿಂಗ್ ಮಾಡಲು ಹಾಗೂ ವಾರ್ನಿಂಗ್ ಮಾಡಿದರೂ ಮತ್ತೆಮತ್ತೆ ಪ್ಲಾಸ್ಟಿಕ್ ಬಳಕೆ ಮಾಡುವವರಿಗೆ ಹಾಗೂ ಅಂತಹ ಅಂಗಡಿಗಳಿಗೆ ದಂಡ ವಿಧಿಸಲು ಸೂಚಿಸಲಾಯಿತು. ಹಾಗೇಯೇ ಪ್ಲಾಸ್ಟಿಕ್ ಬಳಕೆ ಮಾಡದಿರಲು ಜನರಲ್ಲಿ ಜಾಗೃತಿ ಮೂಡಿಸಲು ಪೌರಕಾರ್ಮಿಕರ ಮೂಲಕ ಹಾಗೂ ಘನತ್ಯಾಜ್ಯ ವಾಹನಗಳಿಗೆ ಬ್ಯಾನರ್‌ಗಳನ್ನು ಹಾಕಿ ಹಾಗೂ ಆಟೋಗಳ ಮೂಲಕ ಜಾಗೃತಿ ಮೂಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

ಪೌರಕಾರ್ಮಿಕರು ಹಾಗೂ ಕಸ, ಸ್ವಚ್ಛತೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿಲ್ಲ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂಬುದಾಗಿ ಸದಸ್ಯರು ಸಭೆಗೆ ತಿಳಿಸಿದರು.

ಬೀದಿ ದೀಪಗಳ ನಿರ್ವಹಣೆ ಉತ್ತಮವಾಗಿದ್ದು, ಯಾವುದೇ ದೂರುಗಳು ಇರುವುದಿಲ್ಲ ಯಾವುದಾದರೂ ದೂರುಗಳಿದ್ದರೆ ಮೊಬೈಲ್ ಮುಖಾಂತರ ಗುತ್ತಿಗೆದಾರರನ್ನು ಸಂಪರ್ಕಿಸಿ ದೂರನ್ನು ದಾಖಲಿಸಲು ಸೂಚಿಸಲಾಯಿತು.

ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಸೊಳ್ಳೆ ನಿಯಂತ್ರಣಕ್ಕೆ ಔಷಧಿಗಳನ್ನು ಸಿಂಪಡಿಸಿ ಹಾಗೂ ಫಾಗಿಂಗ್ ಮಾಡಲಾಗುತ್ತಿರುವುದಾಗಿ ಇನ್ನು ಹೆಚ್ಚಿನ ಕಡೆ ಔಷಧಿಗಳನ್ನು ಸಿಂಪಡಿಸಲು ಹಾಗೂ ಫಾಗಿಂಗ್ ಮಾಡಲು ಹಿರಿಯ ಆರೋಗ್ಯ ನಿರೀಕ್ಷಕರಿಗೆ ಸೂಚಿಸಲಾಯಿತು.

ಮಳೆ ಅವಾಂತರ ಬಗ್ಗೆ ಯಾವುದೂ ದೂರು ಇರುವುದಿಲ್ಲ.

ಬಿಡಬ್ಲ್ಯೂಎಸ್‌ಎಸ್‌ಬಿ:-

ಚೌಡೇಶ್ವರಿ ದೇವಸ್ಥಾನ ರಸ್ತೆಯಲ್ಲಿ ಸ್ಯಾನಿಟರಿ ಲೇನ್‌ಗೆ ಬೆಸ್ಕಾಂ ರವರು ಕೇಬಲ್ ಹಾಕಿದ್ದಾರೆ ಕೇಬಲ್ ಅನ್ನು ಲಿಫ್ಟ್ ಮಾಡಿದರೆ BWSSB ಲೇನ್ ಹಾಕಬಹುದು ಈ ಬಗ್ಗೆ ಬೆಸ್ಕಾಂ ಸಹಾಯಕ ಅಭಿಯಂತರರಿಗೆ ತಿಳಿಸಲು ಸೂಚಿಸಲಾಯಿತು

ಕೆಲವು ರಸ್ತೆಗಳನ್ನು ಅಗೆದಿದ್ದು ಸರಿಯಾಗಿ ಮುಚ್ಚಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿದ್ದು, ಲೋಕೇಶ್ ಟೆಂಟ್ ರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಮ್ಯಾನ್‌ಹೋಲ್ ಮಾಡಲು ಕ್ರಮವಹಿಸುವುದಾಗಿ ಸಹಾಯಕ ಅಭಿಯಂತರರು (BWSSB) ತಿಳಿಸಿದರು.

ಬೆಸ್ಕಾಂ, ಪೋಲೀಸ್ ಇಲಾಖೆ, ಘನತ್ಯಾಜ್ಯ ನಿರ್ವಹಣೆ ಕಛೇರಿಯಿಂದ ಗೈರು ಹಾಜರಾಗಿರುತ್ತಾರೆ.

ಕೃಷ್ಣಪ್ಪ ಬಡಾವಣೆಯಲ್ಲಿ ನಿವೇಶನಗಳು ಖಾಲಿ ಇದ್ದು, ಕಸ ಹಾಗೂ ಕೊಳತೆ ವಸ್ತುಗಳನ್ನು ಸತ್ತ ಪ್ರಾಣಿಗಳನ್ನು ಹಾಕುತ್ತಾರೆ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಸಮಿತಿ ಸದಸ್ಯರು ಈಗಾಗಲೇ ದೂರು ನೀಡಿದ್ದರೂ ಅಲ್ಲಿನ ಸಮಸ್ಯೆ ಇತ್ಯರ್ಥವಾಗಿಲ್ಲವೆಂದು ತಿಳಿಸಿದರು.

ಮು.ತಿ.ನೋ.,

Scanned with CamScanner

ರಸ್ತೆಗಳಲ್ಲಿ ಹಳೆಯ ವಾಹನಗಳನ್ನು ತಳ್ಳುವ ಗಾಡಿಗಳು ನಿಲ್ಲಿಸಿರುತ್ತಾರೆ ಇದರಿಂದ ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸಮಿತಿ ಸದಸ್ಯರು ದೂರಿದರು. ಈ ಬಗ್ಗೆ ಕ್ರಮವಹಿಸಲು ಟ್ರಾಫಿಕ್ ಇನ್ಸ್‌ಪೆಕ್ಟರ್ ರವರಿಗೆ ಪತ್ರ ಬರೆಯಲು ವಾರ್ಡ್ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಪೌರಕಾರ್ಮಿಕರುಗಳಿಗೆ ಪ್ರತಿ 6 ತಿಂಗಳಿಗೆ ಒಮ್ಮೆ ಹೆಲ್ತ್ ಕ್ಯಾಂಪ್‌ಗಳನ್ನು ನಡೆಸಲು ಆರೋಗ್ಯ ವೈದ್ಯಾಧಿಕಾರಿಗಳಿಗೆ ತಿಳಿಸಲಾಯಿತು.

ಡೆಂಗ್ಯೂ :- ಡಾ॥ ವೆಂಕಟೇಶ್ ರವರು ಮಾತನಾಡುತ್ತಾ, ಎಲ್ಲಾ ಕಡೆ ಸ್ವಚ್ಚತೆಯನ್ನು ಮಾಡಲಾಗುತ್ತಿದೆ ಆಶಾ ಕಾರ್ಯಕರ್ತರು, ಲಿಂಕ್‌ವರ್ಕರ್ಸ್, ಸ್ಟ್ಯಾಪ್‌ನರ್ಸ್ ಮುಖಾಂತರ ಸ್ವಚ್ಚತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ, ಯಾವುದೇ ಟಮೋಟೊ ಜ್ವರದ ವೈರಾಣು, ಮಂಕಿಪಾಕ್ಸ್, ಕೋವಿಡ್ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಸಭೆಯು 12-00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

27.05.22

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

**ಪ್ರತಿಯನ್ನು,**

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೋಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner